Sanction of the Second Development Block (Stage II) under N. E. S. to Doddaballapur Taluk.

*Q.—1051. Sri G. RAME GOWDA (Dodballapur).—

Will the Government be pleased to state.—

(*a*) when the second Development block (Stage-II) under N. E. S. was sanctioned to Dodballapur Taluk ;

(*b*) whether necessary funds for construction of office building and staff quarters have been provided and allotment intimated ?

A.—Sri RAMAKRISHNA HEGDE (Minister for Co-operation and Development.)

(*a*) October 1961

(*b*) No.

ಶ್ರೀ ಜಿ. ರಾಮೇಗೌಡ.—1961ನೆಯ ಇಸವಿಯಲ್ಲಿ ಈ ಬ್ಲಾಕ್ ಮಂಜೂರಾದರೂ ಕೂಡ ಈ ಕಟ್ಟಡಗಳಿಗೆ ಹಣ ಸಹಾಯ ಮಾಡದೇ ಇರುವುದಕ್ಕೆ ಕಾರಣವೇನು ?

ಶ್ರೀ ರಾಮಕೃಷ್ಣ ಹೆಗ್ಗಡೆ.—ದೊಡ್ಡಬಳ್ಳಾಪುರ ತಾಲ್ಲೂಕಿಗೆ ಪ್ರಾರಂಭದಲ್ಲಿ ಒಂದೇ ಒಂದು ಬ್ಲಾಕನ್ನು ಕೊಡಲಾಗಿತ್ತು, ಆಗಿನ ಪರಿಸ್ಥಿತಿಗೆ ಅಲ್ಲಿ ಒಂದೇ ಬ್ಲಾಕ್ ಸಾಕಾಗಿತ್ತು. ಆಮೇಲೆ ಕೇಂದ್ರ ಸರ್ಕಾರದವರಿಗೆ ಬರೆದು ಮತ್ತೊಂದು ಬ್ಲಾಕ್ ಕೊಡಬೇಕೆಂದು ಕೇಳಿಕೊಂಡೆವು ಅದಕ್ಕೆ ಒಂದು ಕಂಡೀಷನ್ ಮೇಲೆ ಅವರು ಒಪ್ಪಿದರು. ಅದೇನೆಂದರೆ ಮತ್ತೊಂದು ಬ್ಲಾಕ್ ಕೊಟ್ಟರೂ ಅದು ಫಸ್ಟ್ ಸ್ಟೇಜ್‌ನಲ್ಲಿ ಷುರು ಆಗುವುದಿಲ್ಲ, ಸೆಕೆಂಡ್ ಸ್ಟೇಜ್‌ನಲ್ಲಿ ಷುರು ಆಗುತ್ತದೆ ಎಂದು ಹೇಳಿದರು. ಅದಕ್ಕೆ ಸ್ಟಾಫ್ ಕ್ವಾರ್ಟರ್ಸ್‌ಗೆ ಪ್ರೊವಿಜನ್ ಇರಲಿಲ್ಲ. ಆದರೂ ಕೇಂದ್ರಸರ್ಕಾರದವರಿಗೆ ಬರೆದಿದ್ದೆವು ಇದಕ್ಕೂ ಕೊಡಬೇಕಾದ ಅವಶ್ಯಕತೆ ಇದೆ ಎಂದು ಹೇಳಿದ್ದೆವು. ಈ ಮಧ್ಯದಲ್ಲಿ ತುರ್ತು ಪರಿಸ್ಥಿತಿ ಬಂದಿದ್ದರಿಂದ ಅದೂ ನಿಂತು ಹೋಗಿದೆ.

ಶ್ರೀ ಜಿ. ರಾಮೇಗೌಡ.—ಆಫೀಸಿಗೆ ಕಟ್ಟಡ ಇಲ್ಲದೇ ತೊಂದರೆಯಾಗಿರುವುದರಿಂದ ಅದಕ್ಕಾದರೂ ಹಣ ಒದಗಿಸುವುದಕ್ಕೆ ಸಾಧ್ಯವೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಈಗ ಎರಡನೇ ಸ್ಟೇಜ್‌ನಲ್ಲಿ ಬ್ಲಾಕ್ ಕೊಟ್ಟಿರುವುದರಿಂದ ಕಟ್ಟಡಕ್ಕೆ ಸ್ವಲ್ಪವೂ ಹಣ ಇಲ್ಲ, ಕೇಂದ್ರ ಸರ್ಕಾರದಿಂದ ಹಣ ಸಿಕ್ಕಿದರೆ ಮಾಡಿಸೋಣ, ಅಲ್ಲಿ ತೊಂದರೆ ಇರಬಹುದು ; ಅದನ್ನು ಒಪ್ಪುತ್ತೇನೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಆಫೀಸು ಕಟ್ಟಡ ಇಲ್ಲದೇ ಇದ್ದರೂ ಪರವಾಗಿಲ್ಲ ಕೆಲಸವಿಲ್ಲದೇ ಅಧಿಕಾರಿಗಳಿಗೆ ಕೊಡುವುದಕ್ಕೆ ಹಣ ಇರುತ್ತದೆಯೇ ?

(*No answer.*)

ಶ್ರೀ ಜಿ. ರಾಮೇಗೌಡ.—ಕಟ್ಟಡಕ್ಕೆ ಕೇಂದ್ರ ಸರ್ಕಾರದವರು ಹಣ ಕೊಡುತ್ತಾರೆಯೇ ಸಂಸ್ಥಾನ ಸರ್ಕಾರದವರು ಹಣ ಕೊಡುತ್ತಾರೆಯೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಕಮ್ಯೂನಿಟಿ ಡೆವಲಪ್‌ಮೆಂಟ್‌ಗೆ ದುಡ್ಡು ಬರುವುದು ಕೇಂದ್ರ ಸರ್ಕಾರದಿಂದ. ಇದನ್ನು 2ನೇ ಸ್ಟೇಜ್‌ನಲ್ಲಿ ಷುರುಮಾಡಿದ್ದರಿಂದ ಕಟ್ಟಡಕ್ಕಾಗಿ ಏನೂ ಹಣ ಸಿಕ್ಕುವುದಿಲ್ಲ. ಆದರೂ ನಾವು ಅವರನ್ನು ಕೇಳಿದ್ದೇವೆ. ಅಷ್ಟರಲ್ಲಿ ತುರ್ತು ಪರಿಸ್ಥಿತಿ ಬಂದದ್ದರಿಂದ ಮಧ್ಯದಲ್ಲಿ ತೊಂದರೆಯಾಗಿದೆ, ಅಷ್ಟೆ.

Sanction of Nandihalli Tank Work in Byadagi Taluk

*Q.—1104. Smt. SIDDAMMA MAILAR (Byadagi).—

Will the Government be pleased to state :—

(*a*) Whether the Nandihalli tank work in Byadagi Taluk is sanctioned ;